**213 (NS)**

**ಕರ್ನಾಟಕ ಮುಕ್ತ ಶಾಲೆಗಳ ಪರೀಕ್ಷೆ, ಮಾರ್ಚ್ / ಏಪ್ರಿಲ್, 2019**

**Karnataka Open School Examination, March / April, 2019**

# ಸಮಾಜ ವಿಜ್ಞಾನ

# SOCIAL SCIENCE

**(ಹೊಸ ಪಠ್ಯಕ್ರಮ)**

**(New Syllabus)**

ದಿನಾಂಕ : 29. 03. 2019 ]

Date : 29. 03. 2019 ]

ಸಮಯ : ಮಧ್ಯಾಹ್ನ 2.00 ರಿಂದ 5.00 ರವರೆಗೆ ] [ ಗರಿಷ್ಠ ಅಂಕಗಳು : 100

Time : 2.00 P.M. to 5.00 P.M. ] [ Maximum Marks : 100

***ಸೂಚನೆಗಳು :***

i) ಬರವಣಿಗೆ ಅಂದವಾಗಿರಲಿ.

ii) ಉತ್ತರಗಳು ಪ್ರಶ್ನೆಗಳಿಗೆ ಸಮರ್ಪಕವಾಗಿರಲಿ.

iii) ಪ್ರಶ್ನೆಗಳ ಸಂಖ್ಯೆಗಳನ್ನು ಸರಿಯಾಗಿ ಬರೆಯಿರಿ.

iv) ಪ್ರಶ್ನೆ ಪತ್ರಿಕೆಗಳ ಮೇಲೆ ಉತ್ತರಗಳನ್ನು ಬರೆಯಬಾರದು.

I. **ಈ ಕೆಳಕಂಡ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಜಾಗವನ್ನು ಸೂಕ್ತ ಉತ್ತರದಿಂದ ತುಂಬಿ :** $8 \times 1 = 8$

1) ಗುರುತ್ವಾಕರ್ಷಣೆ ನಿಯಮಗಳನ್ನು ರಚಿಸಿದವರು ...................... .

2) ಮುಂಗಾರು ಕಾಲದಲ್ಲಿ ಮಾರುತಗಳ ಸಾಧಾರಣ ದಿಕ್ಕು ...................... .

3) 1948 ಡಿಸೆಂಬರ್ 10 ರಂದು ವಿಶ್ವಸಂಸ್ಥೆ ಘೋಷಣೆ ಮಾಡಿದ ಹಕ್ಕು ...................... .

4) ರಾಜ್ಯ ಶಾಸನ ಸಭೆಯ ಅಧ್ಯಕ್ಷತೆಯನ್ನು ವಹಿಸುವವರು ...................... .

5) ಡಿಸೇಲ್ ಇಂಜಿನುಗಳ ಯಂತ್ರಗಳಿಂದ ಉಂಟಾಗುವ ಮಾಲಿನ್ಯ ...................... .

6) ಎರಡನೇ ಮಹಾಯುದ್ಧ ಆರಂಭವಾದ ವರ್ಷ ...................... .

7) ಕೇಂದ್ರ ಶಾಸಕಾಂಗದ ಮುಖ್ಯಸ್ಥರು ...................... .

8) ಸ್ವಾತಂತ್ರ್ಯ ಬಂದ ಸಮಯದಲ್ಲಿ ಭಾರತದಲ್ಲಿದ್ದ ರಾಜ್ಯಾಡಳಿತ ಸಂಸ್ಥಾನಗಳ ಸಂಖ್ಯೆ ................. .

II. **ಈ ಕೆಳಗೆ ಕೊಟ್ಟಿರುವ ಮೊದಲ ಜೋಡಿಯ ಸಂಬಂಧವನ್ನು ಗ್ರಹಿಸಿ, ಎರಡನೆಯ ಜೋಡಿಯಲ್ಲಿ ಬಿಟ್ಟಿರುವ ಪದವನ್ನು ಬರೆಯಿರಿ :** 3 × 1 = 3

9. ಮುಸೊಲಿನಿ : ಫ್ಯಾಸಿಸಂ :: ಅಡಾಲ್ಫ ಹಿಟ್ಲರ್ : ........................ .

10. ಕುಶಾನ : ಕಾನಿಷ್ಕ :: ಗುಪ್ತ ಸಾಮ್ರಾಜ್ಯ : ........................ .

11. ರೂಪಾಂತರ ಶಿಲೆ : ಕೆಂಪು ಮಣ್ಣು :: ಜ್ವಾಲಾಮುಖಿ ಶಿಲೆ : ........................ .

III. **ಈ ಕೆಳಗಿನ ಘಟನೆಗಳನ್ನು ಕಾಲಾನುಕ್ರಮದಲ್ಲಿ ಬರೆಯಿರಿ :** 4 × 1 = 4

12) ಮುಸ್ಲಿಂ ಲೀಗ್ ಲಾಹೋರ್ ಸಭೆ

13) 'ಬ್ರಿಟಿಷರೇ ಭಾರತವನ್ನು ಬಿಟ್ಟು ತೊಲಗಿ' (ಕ್ವಿಟ್ ಇಂಡಿಯಾ) ಚಳುವಳಿ

14) ಹಿಂದೂ ಮಹಾಸಭಾ

15) ಎರಡನೇ ದುಂಡು ಮೇಜಿನ ಸಭೆ

IV. **ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ *ಒಂದೊಂದು* ವಾಕ್ಯದಲ್ಲಿ ಉತ್ತರಿಸಿ :** 5 × 1 = 5

16) ಮಾನ್ಸೂನ್ ಪದದ ಅರ್ಥ ತಿಳಿಸಿ.

17) ಮಾನವರು ಉಪಯೋಗಿಸಿದ ಪ್ರಥಮ ಲೋಹ ಯಾವುದು ?

18) ಸಂಸತ್ತಿನ ಸರ್ಕಾರದಲ್ಲಿ ನಿಜವಾದ ನಾಯಕರು ಯಾರು ?

19) ಸರ್ವೋಚ್ಛ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರನ್ನು ಯಾರು ನೇಮಿಸುತ್ತಾರೆ ?

20) ಶೀತಲ ಸಮರ ಎಂದರೇನು ?

V. **ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ *ಎರಡು* ವಾಕ್ಯಗಳಲ್ಲಿ ಉತ್ತರಿಸಿ :** 15 × 2 = 30

21) ಫ್ರೆಂಚ್ ಕ್ರಾಂತಿಗೆ ಕಾರಣವಾದ ಅಂಶಗಳನ್ನು ತಿಳಿಸಿ.

22) ಕಬ್ಬಿಣದ ಅದಿರಿನ ಎರಡು ವಿಧಗಳನ್ನು ಹೆಸರಿಸಿ.

23) ಲಾರ್ಡ್ ಕರ್ಜನ್ನನು ಬಂಗಾಳ ವಿಭಜನೆಯ ಪ್ರಸ್ತಾವನೆಯನ್ನು ಮುಂದಿಡಲು ಕಾರಣವಾದ ಅಂಶಗಳನ್ನು ತಿಳಿಸಿ.

24) ನಮ್ಮ ಸಂವಿಧಾನದ ಯಾವುದಾದರೂ ಎರಡು ಲಕ್ಷಣಗಳನ್ನು ಬರೆಯಿರಿ.

25) ಇಸ್ಲಾಂ ಧರ್ಮದ ಮುಖ್ಯ ಬೋಧನೆಗಳನ್ನು ತಿಳಿಸಿ.

26) ರಾಜ್ಯ ನಿರ್ದೇಶಾತ್ಮಕ ತತ್ವಗಳ ಪ್ರಕಾರ 'ಸುಖೀರಾಜ್ಯ' ಕಲ್ಪನೆಯನ್ನು ವಿವರಿಸಿ.

27) 'ಮಾನವರು ಜಲಮಾಲಿನ್ಯಕ್ಕೆ ಕಾರಣರಾಗಿದ್ದಾರೆ' ಹೇಗೆ ?

28) ಮಾನವ ಹಕ್ಕುಗಳಲ್ಲಿ ಗುರುತಿಸಿರುವ ಪ್ರಜಾ ಮತ್ತು ರಾಜಕೀಯ ಹಕ್ಕುಗಳನ್ನು ಪಟ್ಟಿ ಮಾಡಿ.

29) ಎರಡನೇ ಮಹಾಯುದ್ಧದ ನಂತರ ಉದಯಿಸಿದ ಎರಡು ಮಹಾಶಕ್ತಿಗಳನ್ನು ಹೆಸರಿಸಿ.

30) ಯಾವುದಾದರೂ ನಾಲ್ಕು ಸಂಪರ್ಕ ಸಾಧನಗಳನ್ನು ತಿಳಿಸಿ.

31) ಉತ್ತಮ ಪೌರತ್ವಕ್ಕಿರುವ ಅಡಚಣೆಗಳನ್ನು ತಿಳಿಸಿ.

32) ಸರ್ವ ಶಿಕ್ಷಣ ಅಭಿಯಾನದ ಎರಡು ಮುಖ್ಯ ಕಾರ್ಯಗಳನ್ನು ಹೆಸರಿಸಿ.

33) ದಕ್ಷಿಣ ಭಾರತದಲ್ಲಿ ಆಡುವ ಎರಡು ಭಾಷೆಗಳನ್ನು ಹೆಸರಿಸಿ.

34) ಭಾರತದ ರಾಜಕೀಯ ಪಕ್ಷಗಳನ್ನು ಎರಡು ವರ್ಗಗಳಾಗಿ ವಿಭಜಿಸಲಾಗಿದೆ. ಅವು ಯಾವುವು ?

35) ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಲು ಇರಬೇಕಾದ ಅರ್ಹತೆಗಳನ್ನು ತಿಳಿಸಿ.

VI. **ಈ ಕೆಳಗಿನ ಪ್ರತಿಯೊಂದೂ ಪ್ರಶ್ನೆಗಳಿಗೂ ಐದು ಅಥವಾ ಆರು ವಾಕ್ಯಗಳಲ್ಲಿ ಉತ್ತರಿಸಿ :** $10 \times 3 = 30$

36) ಜಾತಿ ಪದ್ಧತಿಯ ಮುಖ್ಯ ಲಕ್ಷಣಗಳನ್ನು ಬರೆಯಿರಿ.

37) ಜಾಗತೀಕರಣದ ಪ್ರಕ್ರಿಯೆಗೆ ಮಾಹಿತಿ ತಂತ್ರಜ್ಞಾನವು ಸಹಾಯಕವಾಗಿದೆ. ಸ್ಪಷ್ಟೀಕರಿಸಿ.

38) ಹೊರ ಹಿಮಾಲಯ ತನ್ನದೇ ಆದ ಭೌಗೋಳಿಕ ಲಕ್ಷಣಗಳನ್ನು ಹೊಂದಿದೆ. ತಿಳಿಸಿ.

39) ಭಾರತದ ಪ್ರಮುಖ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಗಳನ್ನು ಹೆಸರಿಸಿ.

40) ಸಾಮಾಜಿಕ ಸುಧಾರಣೆಯಲ್ಲಿ ಸ್ವಾಮಿ ವಿವೇಕಾನಂದರ ಕೊಡುಗೆಗಳನ್ನು ಬರೆಯಿರಿ.

41) 'ಚಹ' ಬೆಳೆಗೆ ಬೇಕಾಗುವ ಭೌಗೋಳಿಕ ಅಂಶಗಳನ್ನು ತಿಳಿಸಿ.

42) ನಮ್ಮ ಸಂವಿಧಾನದಲ್ಲಿ ಉಲ್ಲೇಖಿಸಿರುವ ಮೂಲಭೂತ ಹಕ್ಕುಗಳನ್ನು ಹೆಸರಿಸಿ.

43) 1857 ರ ಯುದ್ಧದ ಸೈನಿಕ ಕಾರಣಗಳನ್ನು ತಿಳಿಸಿ.

44) ಸಾಮಾಜಿಕ ನ್ಯಾಯ ಸಾಧನೆ ಯಾವುದರ ಮೇಲೆ ಆಧಾರಪಟ್ಟಿವೆ ? ವಿವರಿಸಿ.

45) ಭಾರತದ ವಿದೇಶಾಂಗ ನೀತಿಯ ಉದ್ದೇಶಗಳಾವುವು ?

VII. **ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ :**

$4 \times 4 = 16$

46) ನಗರಸಭೆ ( Municipality ) ಯ ಕಾರ್ಯಗಳನ್ನು ಬರೆಯಿರಿ.

47) 'ಮಣ್ಣು ಒಂದು ಅಮೂಲ್ಯ ಸಂಪತ್ತು' ಅದನ್ನು ಸಂರಕ್ಷಿಸಬೇಕು. ವಿವರಿಸಿ.

48) ಜನಸಂಖ್ಯೆ ಬೆಳವಣಿಗೆಗೆ ಕಾರಣವಾದ ಅಂಶಗಳನ್ನು ತಿಳಿಸಿ.

49) ಅಸಹಕಾರ ಚಳುವಳಿಯ ಸ್ವರೂಪವನ್ನು ವಿವರಿಸಿ.

VIII. 50) **ಭಾರತದ ಒಂದು ಅಂದವಾದ ನಕ್ಷೆಯನ್ನು ಬರೆದು, ಕೆಳಗೆ ಸೂಚಿಸಿರುವ ಸ್ಥಳಗಳನ್ನು ಗುರುತಿಸಿ :**

$1 + 3 = 4$

a) ಕರ್ಕಾಟಕ ಸಂಕ್ರಾಂತಿ ವೃತ್ತ

b) ನರ್ಮದಾ ನದಿ

c) ಪಶ್ಚಿಮ ಘಟ್ಟ